ಪಾವತಿ ಮಾಡಲು ಇವತ್ತೇ ಹಣಕಾಸು ಇಲಾಖೆಗೆ ಸೂಚನೆ ಕೊಡುತ್ತೇನೆ. ಮೊದಲು ಬಾಕಿ ಹಣ ಪಾವತಿ ಮಾಡಬೇಕು. ನಂತರ ಉಳಿದ ಕೆಲಸ. ಆದ್ದರಿಂದ ಆದ್ಯತೆಯ ಮೇರೆ ಅವರಿಗೆ ಆಯಾಯ ತಿಂಗಳು ದುಡ್ಡು ಬಂದಾಗ ಮಾತ್ರ ಅವರು ನೆಮ್ಮದಿಯಿಂದ ಅವರ ಸೊಸೆಯಂದಿರು, ಮಕ್ಕಳು ನೋಡಿಕೊಳ್ಳುತ್ತಾರೆ. ಇಲ್ಲದಿದ್ದರೆ ಅವರಿಗೆ ತೊಂದರೆಯಾಗುತ್ತದೆಂದು ನಮಗೆ ಗೊತ್ತಿದೆ. ಆದ್ದರಿಂದ ಜುಲೈ 15 ನ್ನು ಸಮಯವಾಗಿ ನಿಗದಿ ಮಾಡಿ ಮಾರ್ಚ್ ಕೊನೆಯವರೆಗೆ ಬಾಕಿ ಇರುವ ಎಲ್ಲವನ್ನು ಪೇಮೆಂಟ್ ಮಾಡುವ ವ್ಯವಸ್ಥೆಯನ್ನು ಮಾಡಿಸುತ್ತೇನೆ.

ಅಧ್ಯಕ್ಷರು: ಮಾನ್ಯ ನರೇಂದ್ರ ಸ್ವಾಮಿಯವರೆ, ತಮ್ಮ ಪ್ರಶ್ನೆ ಜಲಸಂಪನ್ಮೂಲ ಇಲಾಖೆಗೆ ವರ್ಗಾವಣೆಯಾಗಿದೆ. ಆದ್ದರಿಂದ ನಾಳೆ ಅದಕ್ಕೆ ಉತ್ತರ ಕೊಡಿಸುತ್ತೇನೆ.

ರೈತರ ಜಮೀನಿನ ಸರ್ವೆ ನಕ್ಷೆ

4 (42) ಶ್ರೀ ಪ್ರತಾಪ್‌ಗೌಡ ಪಾಟೀಲ್ (ಮಸ್ಕಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರಿಗೆ ಜಮೀನಿನ ಸರ್ವೆ ನಕ್ಷೆ ನೀಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಸರಿಪಡಿಸುವುದಕ್ಕೆ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಜೆ.ಕರುಣಾಕರ ರೆಡ್ಡಿ(ಕಂದಾಯ ಸಚಿವರು)

ಅ) ಬಂದಿದೆ.

ರಾಜ್ಯದಲ್ಲಿ ಜಮೀನುಗಳ ಹಿಸ್ಸಾ ಸರ್ವೆ ಆದ ನಂತರ ಪಹಣಿಗಳ ಇಂಡೀಕರಣವಾಗದೇ ಇರುವುದು, ಪಹಣಿ ಮತ್ತು ಆಕಾರಬಂದ್ ವಿಸ್ತೀರ್ಣಕ್ಕೆ ತಾಳೆ ಇಲ್ಲದೇ ಇರುವುದು, ಆಸ್ತಿ ವಿಂಗಡಣೆ, ಭೂಸ್ವಾಧೀನ, ಭೂಮಂಜೂರಾತಿ ಹಾಗೂ ಭೂಸುಧಾರಣಾ ಆದೇಶಗಳಿಂದ ಬಹುಮಾಲೀಕತ್ವದ ಪಹಣಿಗಳಾಗಿರುತ್ತದೆ. ಪಹಣಿ ತಿದ್ದುಪಡಿ ಮತ್ತು ಇಂಡೀಕರಣ ಕಾರ್ಯವನ್ನು ಪೂರ್ಣಗೊಳಿಸಿದ ನಂತರವೇ ಸರ್ವೆ ಕಾರ್ಯ ನಡೆಸಬೇಕಾಗಿರುತ್ತದೆ. ಹೀಗಾಗಿ ರೈತರಿಗೆ ಸರ್ವೆ ನಕ್ಷೆ ನೀಡುವಲ್ಲಿ ಸ್ವಲ್ಪ ಮಟ್ಟಿನ ವಿಳಂಬವಾಗುತ್ತಿದೆ. ಇದಲ್ಲದೆ ಭೂಮಾಪನ ಇಲಾಖೆಯಲ್ಲಿನ ಸಿಬ್ಬಂದಿಯ ಕೊರತೆಯೂ ಸಹ ವಿಳಂಬಕ್ಕೆ ಕಾರಣವಾಗಿರುತ್ತದೆ.

ಪಹಣಿ ತಿದ್ದುಪಡಿ ಮತ್ತು ಇಂಡೀಕರಣ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಎಲ್ಲಾ ಕಂದಾಯಾಧಿಕಾರಿಗಳಿಗೆ ಕಟ್ಟುನಿಟ್ಟಿನ

ಸೂಚನೆಯನ್ನು ನೀಡಲಾಗಿದೆ. ಸಿಬ್ಬಂದಿಯ ಕೊರತೆ ನೀಗಿಸಲು ಸರ್ಕಾರದಿಂದ ಈಗಾಗಲೇ 2009ನೇ ಸಾಲಿನಲ್ಲಿ 198 ಭೂಮಾಪಕರು ಹಾಗೂ 2010ನೇ ಸಾಲಿನಲ್ಲಿ 110 ಅಂದರೆ ಒಟ್ಟು 308 ಭೂಮಾಪಕರನ್ನು ನೇರ ನೇಮಕಾತಿ ಮಾಡಿಕೊಳ್ಳಲಾಗಿದೆ. ಅಲ್ಲದೇ ಇಲಾಖೆಯಲ್ಲಿ ಕೆಳಹಂತದ ವೃಂದಗಳಿಂದ ಒಟ್ಟು 55 ಜನರಿಗೆ ಭೂಮಾಪಕರ ಹುದ್ದೆಗೆ ಬಡ್ತಿ ನೀಡಲಾಗಿದೆ. ಇದಲ್ಲದೇ ಹೊಸದಾಗಿ ಸೃಷ್ಟಿಸಿದ 1600 ಭೂಮಾಪಕರ ಹುದ್ದೆಗಳ ಜೊತೆಗೆ ಇಲಾಖೆಯಲ್ಲಿ ಖಾಲಿ ಇರುವ ಅಲ್ಲದೇ ಸುಮಾರು 500 ಜನ ಪರ್ಯಾವೇಕ್ಷಕರ ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ನಮ್ಮ ಇಲಾಖೆಯಿಂದ ಮಾಡುತ್ತಿದ್ದೇವೆ. ಇದರಿಂದ ಸ್ವಲ್ಪ ಮಟ್ಟಿಗೆ ಸರ್ವೆಯರ್‌ಗಳ ಸಮಸ್ಯೆಯನ್ನು ಬಗೆಹರಿಸಿದಂತಾಗುತ್ತದೆ. ಇದಲ್ಲದೆ, ಕೆಲವು ಜಿಲ್ಲಾಧಿಕಾರಿಗಳನ್ನು ಕರೆದು ಸಭೆಯೊಂದನ್ನು ಕೂಡಾ ನಡೆಸಬೇಕೆಂದಿದ್ದೇವೆ. ಆಯಾ ಜಿಲ್ಲೆಗಳಲ್ಲಿರುವ survey pendency ಬಗ್ಗೆ ವಿಶೇಷ ಆಂದೋಲನವೊಂದನ್ನು ಹಮ್ಮಿಕೊಂಡು, ಅವುಗಳನ್ನು ಇತ್ಯರ್ಥಗೊಳಿಸಲು ಸೂಚನೆಯನ್ನು ಕೊಡುತ್ತೇವೆ.

ಶ್ರೀ ಪ್ರತಾಪ್‌ಗೌಡ ಪಾಟೀಲ್: ಮಾನ್ಯ ಅಧ್ಯಕ್ಷರೆ, ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿ ಬಹಳಷ್ಟು ಭೂ ಸರ್ವೆ ಕಾರ್ಯ ನಿಂತಿದ್ದು ರಾಯಚೂರಿನಲ್ಲಿ ಭೂ ಸರ್ವೆ ಕಾರ್ಯ ವಿಳಂಭವಾಗಿ ರೈತರಿಗೆ ಬಹಳಷ್ಟು ತೊಂದರೆಯಾಗಿದೆ. ರೈತರು ಅವರ ಜಮೀನುಗಳನ್ನು ಮಾರಾಟ ಮಾಡಿದಾಗ ಅದನ್ನು reigister ಮಾಡಿಸಲು ಆಗದೆಯೆ ತೊಂದರೆಯಾಗಿದೆ. ಇವತ್ತು ಭೂಮಿಯ ಬೆಲೆ ಬಹಳ ಹೆಚ್ಚಾಗಿರುವುದರಿಂದ ರೈತರು ಹಿಂದೆ ಮಾತು ಕೊಟ್ಟಂತೆ ಆ ಬೆಲೆಗೆ ಭೂಮಿಯನ್ನು ಕೊಡಲು ತಯಾರಾಗದೆ ಬಹಳಷ್ಟು ತಕರಾರು ಇದೆ. ರೈತರು ಇವತ್ತು ಬಹಳಷ್ಟು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಅದರ ಜೊತೆಗೆ ಕೃಷಿ ಸಾಲ ಆಗಿರಬಹುದು ಅಥವಾ ಸರ್ಕಾರದ ವಿವಿಧ ಸೌಲಭ್ಯಗಳನ್ನು ಪಡೆಯುವಲ್ಲಿ ರೈತರಿಗೆ ಬಹಳ ತೊಂದರೆಯಾಗಿದೆ. ನಮ್ಮ ಸಿಂಧನೂರು ತಾಲ್ಲೂಕು ನೀರಾವರಿ ಪ್ರದೇಶವಾಗಿರುವುದರಿಂದ ಅಲ್ಲಿ ರೈತರು ಬಹಳಷ್ಟು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ಆದಷ್ಟು ಹೆಚ್ಚಿನ ಭೂಮಾಪಕರನ್ನು ನೇಮಿಸಿ ತಕ್ಷಣವೆ ರೈತರಿಗೆ ಅನುಕೂಲ ಮಾಡಿಕೊಡಬೇಕು. ಇವತ್ತು ಬೇರೆ ತಾಲ್ಲೂಕಿನಲ್ಲಿ ಪೆಂಡಿಂಗ್ ರಿಜಿಸ್ಟ್ರೇಷನ್ ಆದರೆ ಮುಂದೆ ಖಾತೆ ಆದಾಗ ಅವರು ಪಕ್ಕಾ ರಿಜಿಸ್ಟ್ರೇಷನ್ ಮಾಡಿಕೊಳ್ಳಲು ಸಾಧ್ಯವಿದೆ. ಆದರೆ ನಮ್ಮಲ್ಲಿ ಪೆಂಡಿಂಗ್ ರಿಜಿಸ್ಟ್ರೇಷನ್ ಮಾಡುತ್ತಿಲ್ಲ. ಬೇರೆ ಬೇರೆ ತಾಲ್ಲೂಕಿನಲ್ಲಿ ಮಾಡುತ್ತಿದ್ದಾರೆ. ದಯಮಾಡಿ ಸಚಿವರು ಅದರ ಬಗ್ಗೆ ಗಮನಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಸಿದ್ದು ಸವದಿ:– ಸರ್ವೆಯರ್ ತೊಂದರೆ ಇಡೀ ರಾಜ್ಯದಲ್ಲಿದೆ ರೈತರ ಭೂಮಿ 3–4 ವರ್ಷದ್ದು ಸರ್ವೆಯಾಗಿಲ್ಲ. ಇದರಿಂದ ಭೂಮಿಯ ಖರೀದಿ ಆಗುವುದಿಲ್ಲ. ಅವರು ಹೇಳಿದ ಪ್ರಕಾರ ಎರಡು ವರ್ಷದ ನಂತರ ಈ ಬೆಲೆಗೆ ಅವರು ಕೊಡಲು ಒಪ್ಪುವುದಿಲ್ಲ. ದಯಮಾಡಿ ಸರ್ವೆಯವರನ್ನು ನೇಮಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಜೆ.ಕರುಣಾಕರ ರೆಡ್ಡಿ (ಕಂದಾಯ ಸಚಿವರು):– ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಕೇಳಿದ್ದಾರೆ ಈ ಮೊದಲು ಸಿಂಧನೂರಿನಿಂದ ನಮ್ಮ ನಾಡಗೌಡರು ಇದೇ ಪ್ರಶ್ನೆಯನ್ನು ಕೇಳಿದ್ದರು. ಇದು ಇಡೀ ರಾಜ್ಯದಲ್ಲಿ ಸಮಸ್ಯೆ ಇದೆ. ಆದ್ದರಿಂದ ಹೊಸದಾಗಿ 1600 ಸರ್ವೆಯರ್‌ಗಳನ್ನು ಭರ್ತಿ ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಿದ್ದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಜೊತೆ ಮಾತನಾಡಿದ್ದೇವೆ. ಅವರು ಜುಲೈಯಲ್ಲಿ ಅರ್ಜಿಗಳನ್ನು ಕರೆದು ಸೆಪ್ಟಂಬರ್‌ನಲ್ಲಿ ಪರೀಕ್ಷೆ ನಡೆಸಿ ಆದಷ್ಟು ಬೇಗ ಅಕ್ಟೋಬರ್‌ನಲ್ಲಿ order ಮಾಡಿ ರಾಜ್ಯದಲ್ಲಿ ಎಲ್ಲೆಲ್ಲಿ ಸರ್ವೆಯರ್‌ಗಳ ಕೊರತೆ ಇದೆ ಅದೆಲ್ಲವನ್ನು ತುಂಬಿಸುತ್ತೇವೆ.

ಅತಿಕ್ರಮಣಕಾರರನ್ನು ತೆರವುಗೊಳಿಸುವುದು

5 (04) ಶ್ರೀ ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ (ಬಿಜಾಪುರ ನಗರ): ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ನಗರದಲ್ಲಿರುವ ಪ್ರಾಚ್ಯವಸ್ತು ಐತಿಹಾಸಿಕ ಸ್ಮಾರಕಗಳ ಪ್ರದೇಶಗಳಲ್ಲಿ ಅತಿಕ್ರಮಣಕಾರರು ಅತಿಕ್ರಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಯಾವ ಯಾವ ಸ್ಮಾರಕಗಳ ಪ್ರದೇಶದಲ್ಲಿ ಎಷ್ಟು ವರ್ಷಗಳಿಂದ ಅತಿಕ್ರಮಿಸಿದ್ದಾರೆ;

ಇ) ಯಾವ ಸ್ಥಳಗಳಲ್ಲಿ ಅತಿಕ್ರಮಣಕಾರರನ್ನು ತೆರವುಗೊಳಿಸಲಾಗಿದೆ ಹಾಗೂ ಉಳಿದ ಕಡೆ ತೆರವುಗೊಳಿಸದಿರಲು ಕಾರಣವೇನು;

ಈ) ಯಾವ ನಿಗಧಿತ ಸಮಯದೊಳಗೆ ಅತಿಕ್ರಮಣಕಾರರನ್ನು ತೆರವುಗೊಳಿಸಲಾಗುವುದು;

ಉ) ನ್ಯಾಯಾಲಯದಲ್ಲಿ ದಾವೆ ಹೂಡಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಇತ್ಯರ್ಥವಾಗಿರುವ ಹಾಗೂ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; ಅವು ಯಾವ ಹಂತದಲ್ಲಿವೆ;